ಮಂಡಿ ಕುಮಾರ್, ಬೆಂಗಳೂರು

ಗಂಡು, ಹೆಣ್ಣಿನ ಮುಂದೆ ಬೇಗ ಶರಣಾಗಲು ಕಾರಣವೇನು?



ಸೋತರೆ ಗೆಲ್ಲಬಹುದು ಎಂದು ಗೊತ್ತಲ್ಲ!

ಕೆ.ಪಿ. ರಾಮಗುಂಡಿ, ಬೈಲಹೊಂಗಲ

ಸಾವಿನ ಪ್ರಮಾಣ ಪುರುಷರಲ್ಲಿಯೇ ಹೆಚ್ಚು. ಏಕೆ ಸರ್?

ಅವರು ಹೆಣ್ಣೂ ಅಂದ್ರೆ ಸಾಯ್ತಾರೆ. ಹೆಣ್ಣು ಹಾಗಲ್ಲ.

ಬಿದರಹಳ್ಳಿ ವಿಜಯ, ಹಿರೇಹಡಗಲಿ

ಸತ್ಯವನ್ನು ಅರಿತವನು ಸತ್ತಂತೆ ಇರಬೇಕಂತೆ. ಇದರ ಅರ್ಥ ತಿಳಿಸಿ?

ಸತ್=ಗೌರವಾನ್ವಿತ. 'ಸಮಯ ಬರಲಿ; ಎಲ್ಲವನ್ನು ತೆರೆದಿಡುತ್ತೇನೆ' ಎಂಬ ಸುಳ್ಳರಂತಲ್ಲದೆ ಇರಬೇಕೆಂದು.

ಅನಸೂಯ ಟಿ, ಕೇದಿಗೆಮನೆ

ಇಲ್ಲೊಬ್ಬರು ಹುಟ್ಟಿದ್ದೇ ತಿನ್ನುವುದಕ್ಕಾಗಿ ಎನ್ನುತ್ತಿದ್ದಾರೆ. ಇದು ಸರೀನಾ ಗುರುವೇ?



ನಿಮ್ಮ ಬಾಣ್ಣಿನಲ್ಲಂತೂ ಸರಿಯಿದೆಯಲ್ಲ ನಿಮ್ಮ ತಲೆಯನ್ನು ತಿನ್ನುತ್ತಿದ್ದಾರಲ್ಲ!

ಜೆ.ಆರ್. ಆದಿನಾರಾಯಣಮುನಿ, ಕೊಳ್ಳೇಗಾಲ

ಸಚಿವರು ಮಾಜಿಯಾದರೆ ಸ್ವಾಮಿಗಳಾಗಬಹುದೆ?

ಅಂತಹ ಯೋಗ್ಯತೆ ಇರುವವರು ನಮ್ಮಲ್ಲಿಲ್ಲ.

ರಮೇಶ ಜ. ಬೊಂಗಾಳೆ, ಬೈಲಹೊಂಗಲ

ದುಡ್ಡಿನ ಶ್ರೀಮಂತಿಕೆಗೂ, ಹೃದಯ ಶ್ರೀಮಂತಿಕೆಗೂ ವ್ಯತ್ಯಾಸವೇನು?

ಹೃದಯ ಶ್ರೀಮಂತಿಕೆಯ ಜಿಎಸ್‌ಟಿ ಗುಡ್‌ನೆಸ್, ಸಿಂಪ್ಲಿಸಿಟಿ, ಟ್ರೂತ್!

ಎನ್. ವೈದೇಹಿ, ಮೈಸೂರು

ಎಲ್ಲರಿಗೂ ಭವಿಷ್ಯ ಹೇಳುವವರಿಗೆ ಅವರ ಭವಿಷ್ಯದ ಬಗ್ಗೆ ಅರಿವು ಇರುವುದಿಲ್ಲವೆ?

ಚಾಕುವಿಗೆ ಹಣ್ಣುಗಳ ರುಚಿ ಗೊತ್ತಿರುವುದಿಲ್ಲ.

ಡಾ. ತಿಮ್ಮರಾಜು, ದಾವಣಗೆರೆ

ಮನೆಯಲ್ಲಿ ಎರಡು ಒಳ್ಳೆಯ ಮಾತಾಡಿದರೆ ಮತಕ್ಕೆ ಸೇರಿಕೊಳ್ಳಿ ಎನ್ನುವರಲ್ಲಾ?

ಗುಡ್. ಈಗಿನ ಕೆಲವು ಮಠಗಳಲ್ಲಿ ಒಳ್ಳೆಯ ಮಾತು, ಆಲೋಚನೆಯವರೇ ಇಲ್ಲವಂತೆ.

ಸುರೇಶ್ ಬಿ.ವಿ. ಬೆಂಗಳೂರು

ನಮ್ಮ ಪ್ರದೇಶಕ್ಕಿಲ್ಲದ ಗ್ರಹಣಗಳ ಬಗ್ಗೆಯೂ ಜ್ಯೋತಿಷಿಗಳು ರಾಶಿಭವಿಷ್ಯ ಹೇಳಲು ಕೂರುವರಲ್ಲ?

ನೈಜ ಗ್ರಹದ ಕಾಟ ತಪ್ಪಿಸಬಹುದು, ತಮ್ಮಂತಹ ಗ್ರಹಗಳ ಕಾಟ ನಿರಂತರವೆಂದು ತೋರಿಸಲು.

ಬಿದರಹಳ್ಳಿ ಚನ್ನವೀರಪ್ಪ, ಹಿರೇಹಡಗಲಿ

ಆತಂಕವು ಅತಿಯಾದಾಗ ಅಂತಕನು ಹತ್ತಿರ ಬರುತ್ತಾನಂತೆ. ಹೌದಾ?

ನಿಜ. ಎಮ್ಮೆಯೇ (MA–Mental Anxiety) ಅಂತಕನ ವಾಹನವಲ್ಲವೆ!

ದಿನೇಶ್, ಗುಡ್ಡದೂರು

ರಾಜಕಾರಣಿಗಳೇಕೆ ಬಿಳಿಯ ಬಣ್ಣದ ವಸ್ತ್ರ ರಾಮ್?

ಬಿಳಿ ತ್ಯಾಗದ ಸಂಕೇತ. ಅವರೂ ತ್ಯಜಿಸಿರುತ್ತಾರಲ್ಲ – ಸತ್ಯ, ಧರ್ಮ, ನ್ಯಾಯ, ಪಕ್ಷ, ಮರ್ಯಾದೆ...

ರಾಜೀವ್ ಎನ್. ಮಾಗಲ್, ಸಕಲೇಶಪುರ

ಅಪ್ಪಂದಿರ ದಿನ ಇರುವ ಹಾಗೆ ಗಂಡಸರ ದಿನ ಯಾಕಿರಬಾರದು?

ಛೆ! ಎಷ್ಟೇ ಹೆನ್‌ಪೆಕ್ಡ್ ಆಗಿದ್ದರೂ ಅಪ್ಪಂದಿರು ಗಂಡಸರಲ್ಲ ಎಂದು ನೀವು ಹೀಗೆ ಆಪಾದಿಸಬಾರದು.

ಬಿ.ಆರ್. ಉಷಾ, ಟೊರಂಟೊ

ಫಾರಿನ್ನಲ್ಲಿ ಹೆಣ್ಣುಮಕ್ಕಳು ಚಳಿಗೋಸ್ಕರ ಮದ್ಯ ಕುಡಿಯುತ್ತಾರೆ. ಇಲ್ಲಿನ ಹೆಣ್ಣುಮಕ್ಕಳೇಕೆ ಕುಡಿಯುತ್ತಾರೆ?

ಮೈಚಳಿ ಬಿಡಲು.

## ವಾರದ ಪ್ರಶ್ನೆ

ಶಿವಮೊಗ್ಗ ರಮೇಶ್, ಮೈಸೂರು

ಒಮ್ಮೆ ಮಾತ್ರ ಜನಪ್ರತಿನಿಧಿಯಾದವನಿಗೆ ಜೀವನವಿಡೀ ಪಿಂಚಣಿ ಕೊಡುವುದು ಎಷ್ಟು ಸರಿ?

ಮತ್ತೊಮ್ಮೆ ಜನಪ್ರತಿನಿಧಿಯಾಗಿಸಿ ಲೂಟಿಗೆ ಅವಕಾಶ ಕೊಡುವುದಕ್ಕಿಂತ ಇದು ಚೀಪ್.

ಚನ್ನವೀರ ನಾಲ್ವಾಡ, ಚಿಕ್ಕೇನಕೊಪ್ಪ

ಬಿಚ್ಚು ಮಾತಿಗೂ, ಚುಚ್ಚು ಮಾತಿಗೂ ಏನು ವ್ಯತ್ಯಾಸ?

ಬಿಚ್ಚು ಮಾತನ್ನು ಇಸಿಜಿಯವನು ಆಡುತ್ತಾನೆ; ಚುಚ್ಚು ಮಾತನ್ನು ವ್ಯಾಕ್ಸಿನ್‌ನವನು ಆಡುತ್ತಾನೆ.

ಪಿ.ಎನ್. ಶ್ರೀವತ್ಸ, ಬೆಂಗಳೂರು

ಮುಂಚೆ ಈ ವಿಭಾಗದಲ್ಲಿದ್ದ 'ಬಹುಮಾನಿತ ಪ್ರಶ್ನೆ'ಗೂ, ಈಗಿನ 'ವಾರದ ಪ್ರಶ್ನೆ'ಗೂ ವ್ಯತ್ಯಾಸವೇನು?

ಕೋವಿಡ್ ಕಾಲದಲ್ಲಿ ಪೋಸ್ಟಾಫೀಸ್ ಬಂದ್; ಬಹುಮಾನ ಪೋಸ್ಟ್‌ಪೋನ್ ಆಗಿ, ಅದು ಇದಾಯಿತಷ್ಟೆ.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ

ಎಣ್ಣೆಗೂ, ಹೆಣ್ಣಿಗೂ ಏನು ವ್ಯತ್ಯಾಸ?



ಹೆಣ್ಣನ್ನು ಹಚ್ಚಿಕೊಂಡರೆ ಬಿಡಿಸಿಕೊಳ್ಳುವುದು ಮನಸ್ಸಾಗದು.

ಅಮರಯ್ಯಾ ಪತ್ರಿಮಠ, ಶೋರಾಪುರ

'ಸ್ಥಿರಾಸ್ತಿ' ಯಾವುದು?

ಇರುವವರೆಗೆ ಬರ್ತ್ ಸರ್ಟಿಫಿಕೇಟ್, ಇಲ್ಲವಾದಾಗ ಡೆತ್ ಸರ್ಟಿಫಿಕೇಟ್.

ನಖಾತೆ ಆನಂದರಾವ್, ಮೈಸೂರು

ಜೀವನದಲ್ಲಿ 'ಗಂಭೀರ' ಎನ್ನುವ ಪ್ರಸಂಗಗಳು ಬರುವುದು ಯಾವಾಗ?

ಆರೋಗ್ಯ ಹದಗೆಟ್ಟು, ಆಸ್ಪತ್ರೆ ಸೇರಿ, ಇನ್ಶೂರೆನ್ಸ್ ಹಣವಷ್ಟೂ ಮುಗಿದಾಗ!

■ ರಾಮ್